# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ದೂರವಾಣಿ : 0821-251397
ಮೊಬೈಲ್: 9448994744
e-mail :aeecescvvm@yahoo.com

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ.)
ಚಾ.ವಿ.ಸ.ನಿ.ನಿ., ವಿ.ವಿ.ಮೊಹಲ್ಲಾ ಉಪವಿಭಾಗ,
ಮೈಸೂರು.


ಸಂಖ್ಯೆ: ಸಕಾನಿಇಂ(ವಿ)/ಸಇಂ(ತಾ)/ವಿವಿಮೊ-ಉವಿ/2019-20/ 334-35

ದಿನಾಂಕ : 08.05.2019 14-

## ಸಭಾ ನಡಾವಳಿ

ವಿ.ವಿ.ಮೊಹಲ್ಲಾ ನಗರ ಉಪ ವಿಭಾಗದಲ್ಲಿ, ಶ್ರೀಯುತ, ಕಾರ್ಯನಿರ್ವಾಹಕ ಇಂಜಿನಿಯರ್(ವಿ),ವಿ.ವಿ.ಮೊಹಲ್ಲಾ ವಿಭಾಗ, ಚಾವಿಸನಿನಿ, ಮೈಸೂರು ರವರ ಅಧ್ಯಕ್ಷತೆಯಲ್ಲಿ ದಿನಾಂಕ 08.05.2019 ರಂದು ಸಂಜೆ 03:00 ಗಂಟೆಗೆ ಜನ ಸಂಪರ್ಕ ಸಭೆಯಲ್ಲಿ ಗ್ರಾಹಕರ ವಿದ್ಯುತ್ ಸಂಬಂಧಿತ ದೂರುಗಳು/ಕುಂದು ಕೊರತೆಗಳ ಕುರಿತು ನಡೆದ ಸಭಾ ನಡಾವಳಿ.

78

**ಹಾಜರಿದ್ದ ಅಧಿಕಾರಿ/ನೌಕರರು:-**

1. ಶ್ರೀ ಪಿ.ಚಿಕ್ಕಸಿದ್ದೇಗೌಡ, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿ.ವಿ.ಮೊಹಲ್ಲಾ ವಿಭಾಗ, ಮೈಸೂರು
2. ಶ್ರೀ ನಟರಾಜು. ಲೆಕ್ಕಾಧಿಕಾರಿ, ವಿ.ವಿ.ಮೊಹಲ್ಲಾ ವಿಭಾಗ, ಮೈಸೂರು.
3. ಶ್ರೀ ಲಕ್ಷ್ಮೀಶ.ಕೆ.ಪಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ಕ),ವಿ.ವಿ.ಮೊಹಲ್ಲಾ ವಿಭಾಗ, ಮೈಸೂರು
4. ಶ್ರೀ ಉಮೇಶ್.ಸಿ, ಪ್ರಭಾರ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿ.ವಿ.ಮೊಹಲ್ಲಾ ಉಪವಿಭಾಗ, ಮೈಸೂರು
5. ಶ್ರೀಮತಿ ಪ್ರತಿಭಾ.ಎಂ, ಸಹಾಯಕ ಇಂಜಿನಿಯರ್ (ತಾಂತ್ರಿಕ), ವಿ.ವಿ.ಮೊಹಲ್ಲಾ ಉಪವಿಭಾಗ, ಮೈಸೂರು
6. ಶ್ರೀಮತಿ ಆರ್.ಹೇಮಲತಾ, ಸಹಾಯಕ ಇಂಜಿನಿಯರ್(ವಿ), ಎಂ.ಜಿ.ಕೊಪ್ಪಲ್ ಶಾಖೆ, ಮೈಸೂರು
7. ಶ್ರೀಮತಿ ಮನುಜ.ಎನ್.ಎನ್, ಸಹಾಯಕ ಇಂಜಿನಿಯರ್(ವಿ), ಒಂಟಿಕೊಪ್ಪಲುಶಾಖೆ, ಮೈಸೂರು
8. ಶ್ರೀ ರಾಜಶೇಖರ್, ಸಹಾಯಕ ಇಂಜಿನಿಯರ್(ವಿ), ಜಯಲಕ್ಷ್ಮಿಪುರಂ ಶಾಖೆ, ಮೈಸೂರು
9. ಶ್ರೀ ಅಬ್ದುಲ್ ಬಾರಿ ಷಬಾಜ್, ಸಹಾಯಕ ಲೆಕ್ಕಾಧಿಕಾರಿ, ವಿ.ವಿ.ಮೊಹಲ್ಲಾ ಉಪವಿಭಾಗ, ಮೈಸೂರು
10. ಶ್ರೀ ಮಹಾಂತಪ್ಪ, ಕಿರಿಯ ಇಂಜಿನಿಯರ್(ವಿ), ಮೇಟಗಳ್ಳಿ ಶಾಖೆ, ಮೈಸೂರು
11. ಶ್ರೀ ಸುರೇಶ್ ಕುಮಾರ್.ಎನ್, ಕಿರಿಯ ಇಂಜಿನಿಯರ್(ವಿ), ಒಂಟಿಕೊಪ್ಪಲು ಶಾಖೆ, ಮೈಸೂರು

**ಹಾಜರಿದ್ದ ಗ್ರಾಹಕರು:-**

-ಸಭೆಗೆ ಗ್ರಾಹಕರು ಹಾಜರಿರುವುದಿಲ್ಲ-

ಮೊದಲನೆಯದಾಗಿ ಹಿಂದಿನ ಸಭೆಯಲ್ಲಿ ಚರ್ಚೆ ನಡೆದಿದ್ದ ವಿಷಯಗಳ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಅನುಪಾಲನಾ ವರದಿಯನ್ನು ಓದಿ ಗ್ರಾಹಕರ ಕುಂದು ಕೊರತೆಗಳನ್ನು ಈಗಾಗಲೇ ಬಗೆಹರಿಸಿರುವುದಾಗಿ ತಿಳಿಸಿದರು.

ಅಇಂ(ವಿ) ಕಛೇರಿ ಚಾ.ವಿ.ಸ.ನಿ.ನಿ.

942
18 MAY 2019

18/05

ಸಭೆಯಲ್ಲಿ ತಿಳಿಸಿದಂತಹ ಅಹವಾಲುಗಳು ಈ ಕೆಳಕಂಡತಿರುತ್ತವೆ.

| ಕ್ರ. ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1. | | Nill | |

ಸಭೆಗೆ ಯಾವ ಗ್ರಾಹಕರು ಹಾಜಾರಾಗದ ಕಾರಣ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿ.ವಿ.ಮೊಹಲ್ಲಾ ವಿಭಾಗ, ಮೈಸೂರು ರವರು ಸಾಮಾನ್ಯ ವಿದ್ಯುತ್ ಸಮಸ್ಯೆಗಳನ್ನು ಮತ್ತು ಅವಶ್ಯಕ ಮುನ್ನೆಚ್ಚರಿಕಾ ಕ್ರಮಗಳ ಕುರಿತು ಮಾರ್ಗದರ್ಶನ ನೀಡಿದರು. ಚರ್ಚಿಸಲಾದ ವಿಷಯಗಳು:-

1.ಖಾತರಿಗೊಂಡ ರದ್ದಿಯಾದ ಪರಿವರ್ತಕಗಳು/ಮೀಟರ್‌ಗಳು ಯಾವುದಾದರು ಇದ್ದಲ್ಲಿ, ಈ ಕೂಡಲೇ ಉಗ್ರಾಣಕ್ಕೆ ಹಿಂದಿರುಗಿಸಲು ಕ್ರಮ ಕೈಗೊಳ್ಳಲು ಎಲ್ಲಾ ಶಾಖಾಧಿಕಾರಿಗಳಿಗೆ ಸೂಚಿಸಿದರು.

2.ಉಪಯೋಗಿಸದೇ ಇರುವ ಗುಣಮಟ್ಟದ ಐಡಲ್ ಪರಿವರ್ತಕಗಳು ಇದ್ದಲ್ಲಿ, ತಾಂತ್ರಿಕ ಕಾರ್ಯ ಸಾಧ್ಯತೆಯ ಅನುಸರಿಸಿ ಸದರಿ ಪರಿವರ್ತಕದ ಮೇಲೆ ಅಧಿಕ ಭಾರಗೊಂಡ ಪರಿವರ್ತಕದ ಭಾರವನ್ನು ಹಾಕಲು ಕ್ರಮವಹಿಸಲು ಎಲ್ಲಾ ಶಾಖಾಧಿಕಾರಿಗಳಿಗೆ ಸೂಚಿಸಿದರು.

3.ಖಾತರಿಗೊಂಡ ದುರಸ್ತಿಯಾದ ಪರಿವರ್ತಕಗಳ ಬದಲಿಗೆ Brand New/Repaired Good ಪರಿವರ್ತಕಗಳನ್ನು ಅತೀ ಜರೂರಾಗಿ ಅವಶ್ಯವಿರುವ ಲಭ್ಯತೆಯ ಆಧಾರದ ಮೇಲೆ ಆಯಾಯ ಶಾಖೆಗೆ ಒದಗಿಸಿಕೊಡಲು ಶ್ರೀ ಲಕ್ಷ್ಮೀಶ.ಕೆ.ಪಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ಕ)/ಉಗ್ರಾಣಾಧಿಕಾರಿ, ವಿ.ವಿ.ಮೊಹಲ್ಲಾ ವಿಭಾಗ, ಮೈಸೂರು ಅವರಿಗೆ ತಿಳಿಸಿದರು.

4.ತಾತ್ಕಾಲಿಕ ಸ್ಥಾವರಗಳಿಗೆ ಸ್ಟಾಟಿಕ್ ಮೀಟರ್‌ಗಳನ್ನೇ ಅಳವಡಿಸಲು ಎಲ್ಲಾ ಶಾಖಾಧಿಕಾರಿಗಳಿಗೆ ತಿಳಿಸಲಾಯಿತು.

5.ದಿನಕ್ಕೆರಡು DTC ಸ್ಥಾವರಗಳನ್ನು (ಫೀಡರ್‌ವಾರು) ಪರೀಶೀಲಿಸಿ, ಅಗತ್ಯ ನಿರ್ವಹಣಾ ಕಾಮಗಾರಿಗಳನ್ನು ಮಾಡಲು ಎಲ್ಲಾ ಶಾಖಾಧಿಕಾರಿಗಳಿಗೆ ಸೂಚಿಸಿದರು.

6.ಎಲ್ಲಾ ಪವರ್‌ಮೆನ್ ಗಳಿಗೆ ಸುರಕ್ಷತಾ ಸಾಮಗ್ರಿಗಳನ್ನು ಒದಗಿಸಿ, ಶಿಸ್ತುಬದ್ಧವಾಗಿ ನಿರ್ವಹಣೆ ಮಾಡಲು ಎಲ್ಲಾ ಶಾಖಾಧಿಕಾರಿಗಳಿಗೆ ಸೂಚಿಸಿದರು.

ಅಂತಿಮವಾಗಿ ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ/ಸದಸ್ಯರುಗಳಿಗೆ ವಂದಿಸುತ್ತಾ ಸಂಜೆ 4:30 ಗಂಟೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ವಿ.ವಿ.ಮೊಹಲ್ಲಾ ಉಪ ವಿಭಾಗ, ಚಾ.ವಿ.ಸ.ನಿ.ನಿ,
ಮೈಸೂರು.

ಪ್ರತಿಯನ್ನು :-
1) ಮಾನ್ಯ ಅಧೀಕ್ಷಕ ಇಂಜಿನಿಯರ್ (ವಿ), ನಗರ ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿ, ಮೈಸೂರು ಅವರ ಅವಗಾಹನೆಗೆ.
2) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿವಿ ಮೊಹಲ್ಲಾ ವಿಭಾಗ, ಚಾವಿಸನಿನಿ, ಮೈಸೂರು ಅವರ ಮಾಹಿತಿಗೆ.